<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>

<u>ಸಿಸಿ ನಂಬರ್ **44/2021**</u>

<u>ಫಿರ್ಯಾದಿದಾರರು</u> ಸರಕಾರ (ಹಾವೇರಿ ಗ್ರಾಮೀಣ ಪೊಲೀಸ ಠಾಣೆ ).

ವಿರುದ್ಧ

<u>ಆರೋಪಿ</u> ಪ್ರಶಾಂತ ತಂದೆ ಚಂದ್ರಪ್ಪ ಲಮಾಣಿ
ವಯಾಃ **21** ವರ್ಷ**,** ಉದ್ಯೋಗಃ ವಿದ್ಯಾರ್ಥಿ
ಸಾಃ ಕಲ್ಲೆದೇವರ ತಾಂಡಾ**,** ತಾಃ ಬ್ಯಾಡಗಿ ಜಿಃ ಹಾವೇರಿ

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಅಡಿಯಲ್ಲಿ ಆರೋಪಿತನ ಹೇಳಿಕೆ</u>

ಪ್ರಶ್ನೆ.-1 ಈ ಪ್ರಕರಣದಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷವನ್ನು ನೀವು ತಿಳಿದುಕೊಂಡಿದ್ದೀರಾ?

ಉತ್ತರಃ

ಪ್ರಶ್ನೆ.-2 ಪ್ರಾಸಾ-7 ಶಿವಪ್ಪ ತಂದೆ ಹಾಲಪ್ಪ ಲಮಾಣಿ ಮುಖ್ಯಪೇದೆ, ಗ್ರಾಮೀಣ ಪೊಲೀಸ ಠಾಣೆ ಹಾವೇರಿ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕಃ 08.01.2021 ರಂದು ರಾತ್ರಿ 9-00 ಘಂಟೆಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ದಿನಾಂಕಃ 09.01.2021 ರಂದು ರಾತ್ರಿ ಬೆಳಗಿನ ಜಾವ 2-00 ಘಂಟೆಗೆ ಚಾ.ಸಾ-1 ಇವರು ಠಾಣೆಗೆ ಖುದ್ದಾಗಿ ಹಾಜರಾಗಿ ನೀಡಿದ ಲಿಖಿತ ಪಿರ್ಯಾದಿಯನ್ನು ನೀಡಿದ ನಂತರ ಸದರಿ ಪಿರ್ಯಾದಿ ಆಧಾರದ ಮೇಲೆ ಠಾಣಾ ಗುನ್ನಾ ನಂಬರಃ 6/2021 ರಂದು ಈ ಪರಕರಣವನ್ನು ದಾಖಲಿಸಿ ನಂತರ ಪ್ರ.ವದಿವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಂತರ ಈ ಪ್ರಕರಣದ ತನಿಖೆಯನ್ನು ಮುಂದಿನ ತನಿಖೆಗಾಗಿ ಚಾ.ಸಾ-15 ಇವರಿಗೆ ವಹಿಸಿಕೊಟ್ಟಿದ್ದೇನೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ.-3 ಪ್ರಾಸಾ-8 ಶ್ರೀಮತಿ ನಾಗಮ್ಮ.ಕೆ ಸಿ.ಪಿ.ಐ ನಗರ ವೃತ್ತ, ಭದ್ರಾವತಿ ಇವರು ತಮ್ಮ ಸಾಕ್ಷಿಯಲ್ಲಿ ದಿನಾಕಃ 09.012021 ರಂದು ಹಾವೇರಿ ಸರ್ಕಾರಿ ಆಸ್ಪತ್ರೆಯಲ್ಲಿ ಇರುವಂತಹ ಶವಗಾರಕ್ಕೆ ಬೇಟಿ ನೀಡಿ ಚಾ.ಸಾ-2 ಮತ್ತು 3 ಇವರ ಸಮಕ್ಷಮ ಬೆಳಗಿನ 9-00 ಘಂಟೆಯಿಂದ 10-00 ಘಂಟೆಯವರೆಗೆ ಶವಪಂಚನಾಮೆಯನ್ನು ಜರುಗಿಸಿದ್ದೇನೆ. ಚಾ.ಸಾ-10 ಇವರಿಗೆ ಶವಪರೀಕ್ಷೆ ಆದ ನಂತರ ಮರಣೋತ್ತರ ಪರೀಕ್ಷ ವರದಿಯನ್ನು ಕೊಡಲು ಚಾ..ಾ-10 ಇವರಿಗೆ ಮನವಿ ಸಲ್ಲಿಸಿದ್ದೇನೆ. ಅದೇ ದಿನ ಅಪಘಾತವಾದ ಸ್ಥಳಕ್ಕೆ ಬೇಟಿ ನೀಡಿ ಚಾ.ಸಾ-1 ಇವರು ತೋರಿಸಿದ ಸ್ಥಳದಲ್ಲಿ ಚಾ.ಸಾ-4 ಮತ್ತು 5 ಇವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿ ಮತ್ತು ಘಟನಾ ಸ್ಥಳದ ಕಚ್ಚಾ ನಕಾಶಪಿಯನ್ನು ಮಾಡಿದ್ದೇನೆ. ಸದರಿ ಸಮಯದಲ್ಲಿ ಎರಡು ಪೋಟೋಗಳನ್ನು ತೆಗೆದಿದ್ದೆನೆ. ಅದೇ ದಿವಸ ಅಪಘಾತದಲ್ಲಿ ಭಾಗಿಯಾದಂತಹ ಟ್ರ್ಯಾಕ್ಟರ ಟ್ರೇಲರ ಮತ್ತು ಒಂದು ಬೈಕನ್ನು ಪಂಚರ ಸಮಕ್ಷಮ ಜಪ್ತು ಮಾಡಿ ನನ್ನ ವಶಕ್ಕೆ ಪಡೆದಿದ್ದೇನೆ. ಆ ಸಮಯದಲ್ಲಿ ಎರಡು ಪೋಟೋಗಳನ್ನು ತೆಗೆದಿದ್ದೇನೆ. ಚಾ.ಸಾ-6 ಮತ್ತು 9 ಇವರ ಹೇಳಿಕೆಗಳನ್ನು ಪಡೆದಿದ್ದೇನೆ. ಚಾ.ಸಾ-11 ಇವರಿಂದ ಮನವಿ ಪತ್ರ ಪಡೆದಿದ್ದೇನೆ. ಚಾ.ಸಾ-13 ರವರಿಂದ ಐ.ಎಂ.ವಿ ವರದಿಯನ್ನು ಕುಡಲು

ವಿನಂತಿ ಪತ್ರವನ್ನು ಬರೆದುಕೊಂಡಿದ್ದೇನೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ.-4 ಪ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ದಿನಾಂಕಃ 15.01.2021 ರಂದು ಚಾ.ಸಾ-8 ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ. ಅದೇ ರೀತಿ 2 ನೇ ಆರೋಪಿಗೆ ಐ.ಎಂ.ವಿ ನೋಟಿಸ ನೀಡಿ ಅದರ ಉತ್ತರ ಪಡೆದಿದ್ದೇನೆ. ಅದೇ ರೀತಿ ಅಪಘಾತದಲ್ಲಿ ಭಾಗಿಯಾದಂತಹ ಮೋಟಾರ ಸೈಕಲ ಅದರ ಮಾಲೀಕರಿಂದ ಇಂಡೆಮ್ನಿಟಿ ಬಾಂಡನ್ನು ಪಡೆದುಕೊಂಡು ನಂತರ ಅದನ್ನು ಅದರ ಮಾಲೀಕರ ವಶಕ್ಕೆ ಬಿಟ್ಟುಕೊಟ್ಟಿದ್ದೇನೆ. ಅಪಘಾತಪಡಿಸಿದ ಟ್ರ್ಯಾಕ್ಟರ ಟ್ರೇಲಿ ಮತ್ತು ಇಂಜಿನ ನಂಬರ ಠಾಣಾ ಮಾಲುಪಟ್ಟಿ ಸಂಖ್ಯೆಃ 5/2021 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ. ಟ್ರ್ಯಾಕ್ಟರ ಇಂಜಿನ ಮತ್ತು ಟ್ರೇಲರನ್ನು ನ್ಯಾಯಾಲಯದ ಆದೇಶದಂತೆ ಬಿಟ್ಟುಕೊಟ್ಟಿದ್ದೇನೆ. ಚಾ.ಸಾ-10 ಇವರಿಂದ ಐ.ಎಂ.ವಿ ವರದಿ ಪಡೆದ್ದೇನೆ. ದಿನಾಂಕಃ 10.03.2021 ರದು ಚಾ.ಸಾ-11 ಇವರಿಂದ ಎರಡು ಗಾಯದ ಪ್ರಮಾಣ ಪತ್ರದ ಪಡೆದು ಕಡತಕ್ಕೆ ಅಳವಡಿಸಿದ್ದೇನೆ. ನಂತರ ಈ ಪ್ರಕರಣದಲ್ಲಿ ತನಿಖೆ ಮಾಡಿ ತೆಗೆದುಕೊಂಡು ಆಧಾರದ ಮೇಲೆ 2 ನೇ ಆರೋಪಿಯ ಮೇಲೆ ಸಾಕ್ಷ ಆಧಾರಗಳು ಕಂಡು ಬಂದಿದ್ದರಿಂದ ನ್ಯಾಯಾಲಯಎಕ್ಕೆ 2 ನೇ ಆರೋಪಿಯ ವಿರುದ್ಧ ದೋಷಾರೋಪಣಣೆ ಪಟ್ಟಿ ಸಲ್ಲಿಸಿದ್ದೇನೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ.-5 ನೀವು ಏನಾದರೂ ಹೇಳುವುದು ಇದೆಯಾ?

ಉತ್ತರಃ

ಪ್ರಶ್ನೆ.-6 ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುತ್ತೀರಾ?

ಉತ್ತರಃ

(ಮೇಲೆ ಹೇಳಿದ ಆರೋಪಿಯ ಹೇಳಿಕೆಗಳನ್ನು ಅವರಿಗೆ ಗೊತ್ತಿರುವ ಭಾಷೆಯಲ್ಲಿ ಅವರಿಗೆ ಓದಿ ಹೇಳಲಾಯಿತು ಮತ್ತು ಆರೋಪಿಯು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು).

ಹಾವೇರಿ.
ದಿನಾಂಕಃ**06.02.2026**

(ಮಹಮ್ಮದ ಅನ್ವರಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯ ಸಹಿಃ